**ಸಾಕ್ಷಿಯನ್ನು ದಿಃ 20.08.2025 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 2 ನೇ ಎದುರುದಾರರ ಪರ ಶ್ರೀ ಪಿ.ಎ.ಎಸ್ ವಕೀಲರಿಂದಃ**

1.ನಾನು ನನ್ನ ಜಮೀನಿನಲ್ಲಿ ವ್ಯವಸಾಯ ಹಾಗೂ ಕೂಲಿ ಕೆಲಸವನ್ನು ಮಾಡುತ್ತಿದ್ದೆ. ನನ್ನ ಗ್ರಾಮಾ ಚನ್ನಂಗೆರೆಯಲ್ಲಿ ನಮಗೆ ಗದ್ದೆ ಹಾಗೂ ಹೊಲ ಎರಡು ಇದೆ. ಅದರಿಂದ ನಮಗೆ ಆಧಾಯ ಬರುತ್ತದೆ. ಅಪಘಾತದ ಸಮಯದಲ್ಲಿ ನಾನು ಟಿ ವಿ ಎಸ್ ಮೊಪೆಡ್ ಬೈಕ್ ಚಲಾಯಿಸುತ್ತಿದ್ದೆ. ನನ್ನ ಬೈಕಿನ ಆರ್ ಸಿ ಹಾಗೂ ವಿಮಾ ಪಾಲಿಸಿ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕೊಟ್ಟಿದ್ದೇನೆ ಎನ್ನುತ್ತಾರೆ. ನನಗೆ ಚಾಲನ ರವಾನಗಿ ಇರಲಿಲ್ಲ ಎಂದರೆ ಸರಿಯಲ್ಲ. ಅದನ್ನು ಪೋಲಿಸರು ತೆಗೆದುಕೊಂಡಿದ್ದಾರೆ ಎನ್ನುತ್ತಾರೆ. ನಾನು ಮೊದಲಿಗೆ ಸಾಲಿಗ್ರಾಮಾ ಆಸ್ಪತ್ರೆಗೆ ಹೋಗಿದ್ದು ಅಲ್ಲಿಂದ ಕೆ ಆರ್ ನಗರದ ಸಮೃದ್ಧಿ ಆಸ್ಪತ್ರೆಗೆ ಹೋಗಿದ್ದು ಅಲ್ಲಿಂದ ಮೈಸೂರಿನ ಸುಪ್ರಿಯ ಆಸ್ಪತ್ರೆಗೆ ದಾಖಲಾಗಿರುತ್ತೇನೆ. ನಾನು ರಸ್ತೆಯ ನಿಯಮವನ್ನು ಉಲ್ಲಂಘಿಸಿದ್ದರಿಂದ ಅಪಘಾತವಾಗಿದೆ ಎಂದರೆ ಸರಿಯಲ್ಲ. ಎದುರುದಾರರ ವಾಹನದ ತಪ್ಪಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ.

2. ಸುಪ್ರಿಯ ಆಸ್ಪತ್ರೆಯಲ್ಲಿ ಚಿಕಿತ್ಸೆಯನ್ನು ನೀಡಿದ ನಂತರ ಗುಣಮುಖವಾದ ನಂತರ ಬಿಡುಗಡೆ ಮಾಡಿದ್ದಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನನಗೆ ನಡೆಯಲು ಕೂರಲು ಆಗುತ್ತಿಲ್ಲ ಎನ್ನುತ್ತಾರೆ. ನನ್ನ ಬಿಡುಗಡೆ ಪತ್ರದಲ್ಲಿ ಈ ರೀತಿ ನಡೆಯಲು ಕೂರಲು ಆಗುವುದಿಲ್ಲ ಎಂದು ನಮೂದಿಸಿಲ್ಲ ಎಂದರೆ ಸರಿಯಲ್ಲ. ಆಸ್ಪತ್ರೆಯಿಂದ ಬಿಡುಗಡೆಯಾದ ನಂತರ ಪುನಃ ಚಿಕಿತ್ಸೆ ಪಡೆದುಕೊಂಡ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಅಪಘಾತದ ಮರುದಿನ ನನ್ನ ಮಗ ದೂರನ್ನು ನೀಡಿದ್ದಾನೆ ಎಂದರೆ ಸರಿ. ಈ ಅಪಘಾತವಾದ ತಕ್ಷಣ ನನ್ನ ಮಗಳು ಭವ್ಯ ಸ್ಥಳಕ್ಕೆ ಬಂದಿದ್ದಾರೆ ಎಂದರೆ ಸರಿ. ಆ ಸಂದರ್ಭದಲ್ಲಿ ಆಟೋ ಚಾಲಕ ಎಸ್ ಆರ್ ಕುಮಾರ್ ಆಟೋ ಚಲಾಯಿಸುತ್ತಿದ್ದ ಎಂದು ನನ್ನ ಮಗಳು ಭವ್ಯ ಹೇಳಿದ್ದಾಳೆ ಎಂದರೆ ಇರಬಹುದು. ಎಸ್ ಆರ್ ಕುಮಾರ್ ರವರು ಒಂದನೇ ಎದುರುದಾರರ ಮಗ ಎಂದರೆ ಸರಿ.

3. ಕಂಪನಿಯ ತನಿಖಾಧಿಕಾರಿಗಳು ಅಪಘಾತದ ಬಗ್ಗೆ ಭವ್ಯ ರವರ ಬಳಿ ಯಾರು ಆಟೋ ಚಲಾಯಿಸುತ್ತಿದ್ದರು ಎಂಬ ಬಗ್ಗೆ ವಿಚಾರಿಸಿಕೊಂಡು ಹೋಗಿದ್ದಾರೆ ಎಂದರೆ ಸರಿ. ಈ ಬಗ್ಗೆ ವಿಡಿಯೋ ಮಾಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಆಟೋ ಚಾಲಕ ಎಸ್ ಆರ್ ಕುಮಾರ್ ರವರಿಗೆ ಚಾಲನ ಪರವಾನಗಿ ಇಲ್ಲದಿದ್ದ ಕಾರಣ ನಾನು ಆಟೋ ಮಾಲಿಕ ಷಾಮಿಲಾಗಿ ನವರತ್ನ ಕುಮಾರ್ ಎನ್ನುವವರ ಮೇಲೆ ಸಳ್ಳಾಗಿ ದೋಷರೋಪಣ ಪಟ್ಟಿ ಸಲ್ಲಿಸುವಂತೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಎಸ್ ಆರ್ ಕುಮಾರ್ ರವರಿಗೆ ಚಾಲನ ಪರವಾನಗಿ ಇಲ್ಲದೆ ಇದ್ದ ಕಾರಣ ನಾವು ಹಾಗೂ ಆಟೋ ಮಾಲಿಕರು ಪೋಲಿಸರೊಂದಿಗೆ ಷಾಮಿಲಾಗಿ ನವರತ್ನ ಕುಮಾರ್ ಎಂಬುವವರ ಮೇಲೆ ದೋಷರೋಪಣ ಪಟ್ಟಿ ಸಲ್ಲಿಸುವಂತೆ ಮಾಡಿದ್ದೇವೆ ಎಂದರೆ ಸರಿಯಲ್ಲ. ಕಂಪನಿಯ ತನಿಖಾಧಿಕಾರಿಯವರಿಗೆ ಎಸ್ ಆರ್ ಕೂಮಾರ್ ಆಟೋ ಚಲಾಯಿಸುತ್ತಿದ್ದ ಬಗೆಗ ಮಾಹಿತಿ ಇದ್ದು ಈ ಬಗ್ಗೆ ವಿಡಿಯೋ ಮಾಡಿಕೊಂಡಿದ್ದಾರೆ ಎಂದರೆ ಈ ಬಗ್ಗೆ ಗೊತ್ತಿಲ್ಲ. ಪರಿಹಾರ ಸಿಗುವುದಿಲ್ಲ ಎಂಬ ದೃಷ್ಟಿಯಿಂದ ನಾವು ಸುಳ್ಳು ದೂರನ್ನು ಹಾಕಿದ್ದೇವೆ ಎಂದರೆ ಸರಿಯಲ್ಲ. 2 ನೇ ಎದುರುದಾರರು ನಮಗೆ ಪರಿಹಾರ ಕೂಡಲು ಭಾಧ್ಯರಲ್ಲ ಎಂದರೆ ಸರಿಯಲ್ಲ. ಮೊದಲನೆ ಎದುರುದಾರರ ಮಾಲಿಕರು ಹಾಗೂ ನವರತ್ನ ಕುಮಾರ್ ರವರು ಸುಳ್ಳಾಗಿ ದೋಷರೋಪಣ ಪಟ್ಟಿ ಸಲ್ಲಿಸುವಂತೆ ಮಾಡಿದ್ದೆವೆ ಎಂದರೆ ಸರಿಯಲ್ಲ.

4. ಔಷಧಿ ಬಿಲ್ಲುಗಳನ್ನು ನಾವು ಸುಳ್ಳಾಗಿ ಸೃಷ್ಟಿಸಿ ಹಾಜರುಪಡಿಸಿದ್ದೇವೆ ಎಂದರೆ ಸರಿಯಲ್ಲ. ಔಷಧ ಬಿಲ್ಲುಗಳಲ್ಲಿ ನನ್ನ ಹೆಸರು ನಮೂದಾಗಿಲ್ಲ ಎಂದರೆ ನನಗೆ ಗೊತ್ತಿಲ್ಲ. ಔಷಧಿ ಬಿಲ್ಲುಗಳಿಗೆ ತಕ್ಕಹಾಗೆ ಸಲಹಾ ಚೀಟಿಗಳನ್ನು ನೀಡಿಲ್ಲ ಎಂದರೆ ಸರಿಯಲ್ಲ. ನನಗೆ ಡಾಃ ಉಲ್ಲಾಸ್ ಎಂಬುವವರು ಚಿಕಿತ್ಸೆ ನೀಡಿದಾದರೆ. ಪರಿಹಾರ ಪಡೆಯುವ ಸಲುವಾಗಿ ಸುಳ್ಳು ಪ್ರಮಾಣ ಪತ್ರವನ್ನು ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 2 ನೇ ಕಂಪನಿಯ ತನಿಖಾಧಿಕಾರಿಗಳು ಅಪಘಾತದ ಹಿನ್ನೆಲೆ ಹಾಗೂ ಆಟೋ ಚಾಲಕನ ಬಗ್ಗೆ ಸಂಪೂರ್ಣ ವಿಡಿಯೋವನ್ನು ಮಾಡಲಾಗಿರುತ್ತದೆ ಎಂದರೆ ನನ್ನ ಮುಂದೆ ಮಾಡಿಲ್ಲ ಎನ್ನುತ್ತಾರೆ.

ಮರುವಿಚಾರಣೆಃ ಇಲ್ಲ

(ನನ್ನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ.

ಸಹಿ/-

ಹೆಚ್ಚುವರಿ ಲಘು ವ್ಯವಹಾರಗಳ ನ್ಯಾಯಾಧೀಶರು

ಮತ್ತು ಎಂ.ಎ.ಸಿ.ಟಿ., ಮೈಸೂರು.